ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

20

ಇಲಾಖೆ / ವಿಷಯ : DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE 24/10/20

**ಶ್ರೀಕಾರ** ಡಿಸೆಂಬರ್‌ನಿಂದ ಕಾಮಗಾರಿ ಶುರು

# ಹೊಸ ಸಂಸತ್‌ನಲ್ಲಿ ದೇಶದ ಎಲ್ಲ ಸಂಸದರಿಗೂ ಆಫೀಸ್!

ನವದೆಹಲಿ: ಸಂಸತ್ತಿನ ನೂತನ ಕಟ್ಟಡ ನಿರ್ಮಾಣ ಕಾಮಗಾರಿ ಡಿಸೆಂಬರ್‌ನಲ್ಲಿ ಆರಂಭವಾಗಲಿದ್ದು, 2022ರ ಅಕ್ಟೋಬರ್‌ಗೆ ಪೂರ್ಣಗೊಳ್ಳಲಿದೆ. 861 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಹೊಸ ಸಂಸತ್ ಭವನದಲ್ಲಿ ಎಲ್ಲ ಸಂಸದರಿಗೂ ಪ್ರತ್ಯೇಕ ಕಚೇರಿ



ಒದಗಿಸಲಾಗುತ್ತದೆ. ಕಾಗದರಹಿತ ಕಚೇರಿ ಮಾಡಲು ಡಿಜಿಟಲ್ ಸೌಲಭ್ಯಗಳನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ಹಾಲಿ ಸಂಸತ್‌ನ ಎಲ್ಲಾ ಕಾರ್ಯ ಚಟುವಟಿಕೆಗಳಿಗೆ ಯಾವುದೇ ಅಡ್ಡಿ ಇಲ್ಲದಂತೆ ಹೊಸ ಕಟ್ಟಡದ ಕಾಮಗಾರಿಗೆ ಎಲ್ಲಾ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಲೋಕಸಭಾ ಕಾರ್ಯಾಲಯ ತಿಳಿಸಿದೆ. ಹೊಸ ಕಟ್ಟಡದ ಕಾಮಗಾರಿಯಿಂದ ಸಂಸತ್ ಭವನ ಮತ್ತು ಸುತ್ತಮುತ್ತಲ ಕಟ್ಟಡಗಳಿಗೆ ಯಾವುದೇ ವಾಯು ಮತ್ತು ಶಬ್ದಮಾಲಿನ್ಯದ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಕಾಮಗಾರಿ ಮೇಲೆ ಕಣ್ಗಾವಲಿಗಾಗಿ ಲೋಕಸಭಾ ಕಾರ್ಯದರ್ಶಿ, ನಗರಾಭಿವೃದ್ಧಿ ಸಚಿವಾಲಯ, ಕೇಂದ್ರ ಲೋಕೋಪಯೋಗಿ ಸಚಿವಾಲಯ, ಎನ್‌ಡಿಎಂಸಿ ಮತ್ತು ವಾಸ್ತುವಿನ್ಯಾಸಕಾರರನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಲಾಗುವುದು ಎಂದು ಕಾರ್ಯಾಲಯ ತಿಳಿಸಿದೆ.